ಎಂದು ಹೇಳಿದಾಗ ಮತ್ತೆ ನಾವೇ ಅವನಿಗೆ ದಮ್ಮಯ್ಯ ಹಾಕುತ್ತಿದ್ದೆವು: ''ದಯವಿಟ್ಟು ಹೋಗಬೇಡ, ನೀನು ಇಲ್ಲೇ ಇರು.''

ಯಾಕಿರಬೇಕು ಅವನು? ನಮಗೆ ತಿಳಿಯದು! ನಮ್ಮ ರಜೆಗೊಂದು ಮೋಜಿನ ಸಂಗಾತಿಯಾಗಿಬಿಟ್ಟಿದ್ದ, ಅಷ್ಟೇ. ನಾವು ಇಂಥ ದಿನಚರಿಗಳನ್ನೆಲ್ಲ ಮುಗಿಸಿ ಮನೆ ಸೇರುವ ಹೊತ್ತಿಗೆ ಮಧ್ಯಾಹ್ನದ ಬಿಸಿಲು. ಅಜ್ಜಮ್ಮ ಬೈಯುತ್ತಲೇ ನಮಗೆ ಸ್ನಾನ ಮಾಡಲು ಹೇಳುತ್ತಿದ್ದಳು. ತಾನಿಲ್ಲದಿದ್ದರೆ ಈ ನಿನ್ನ ಮೊಮ್ಮಕ್ಕಳು ಅಲ್ಲೆಲ್ಲೋ ಕಿತಾಪತಿ ಮಾಡಲು ಹೋಗಿ ಹೊಂಡಕ್ಕೆ ಬೀಳುತ್ತಿದ್ದರು, ನಾನಿದ್ದುದಕ್ಕೆ ಸರಿಹೋಯಿತು – ಎಂದು ಆದ, ಆಗಿರದ ಅನೇಕ ಪ್ರಕರಣಗಳನ್ನು ನಂಬುವಂತೆ ಅಜ್ಜಮ್ಮನಿಗೆ ವರದಿ ನೀಡಿ ನಮ್ಮನ್ನು ಅಣಕಿಸುತ್ತಿದ್ದ. ತೋಟ, ಕೊಟ್ಟಿಗೆ ಎಂದು ಅಜ್ಜಮ್ಮನಿಗೂ ಮನೆಯಲ್ಲಿ ಮೈ ತುಂಬ ಕೆಲಸ. ಇಷ್ಟು ಹೊತ್ತು ನಾವು ಮನೆಯಲ್ಲಿ ಇಲ್ಲದೇ ಹೋಗಿದ್ದು ಅವಳಿಗೂ ಅನುಕೂಲವೇ ಆಯಿತು. ಜೊತೆಗೆ ಕೇಶನೂ ಇದ್ದುದರಿಂದ ಸ್ವಲ್ಪ ನಂಬಿಕೆ, ಆಧಾರ.

ಆದರೆ, ಈ ನಂಬಿಕೆ ಅಲುಗಾಡಿಸುವಂಥ ಘಟನೆ ಒಂದೆರಡು ಮೂರು ದಿನಗಳಲ್ಲೇ ಆಗಿಹೋಯಿತು. ಅದೊಂದು ಮಧ್ಯಾಹ್ನದ ಅದ್ಭುತ ಪ್ರಕರಣ. ಅದಕ್ಕೆ ಸಿದ್ಧತೆ ನಮ್ಮೊಳಗೇ ಬಹು ದಿನಗಳಿಂದ ನಡೆದಿತ್ತು. ಆದರೂ ಧೈರ್ಯ ಸಾಲದಾಗಿ ಯೋಜನೆ ಕೈ ಬಿಟ್ಟಿದ್ದೆವು. ಈಗ ಕೇಶಪ್ಪಚ್ಚಿ ಬಂದುದರಿಂದ ಈ ಮಹತ್ವದ ಕಾರ್ಯಕ್ರಮವನ್ನು ಕೈಗೆತ್ತಿಕೊಂಡೆವು.

ಮಧ್ಯಾಹ್ನದ ಹೊತ್ತಿಗೆ ದೋಣಿಯಾನಕ್ಕೆ ಒಂದೆರಡು ಗಂಟೆ ವಿರಾಮವಿರುತ್ತದೆ. ಆಗ ದೋಣಿ ನಡೆಸುವ ಅಂಬಿಗರು ಸ್ನಾನ, ಊಟ ಮಾಡಿ ಒಂದಷ್ಟು ಹೊತ್ತು ವಿಶ್ರಾಂತಿ ಪಡೆಯುತ್ತಿದ್ದರು. ಇಷ್ಟು ಹೊತ್ತೂ ನಮ್ಮ ದುಷ್ಟ ಚತುಷ್ಟಯದ ಪರಿಚಯ ಹೇಳಲಿಲ್ಲ. ಬಾಲಚಂದ್ರ, ಕೃಷ್ಣ ಪಕ್ಕದ ಮನೆಯ ಮಕ್ಕಳಾದರೆ ನಾನು ಮತ್ತು ನನ್ನ ತಂಗಿ ರಜೆಯಲ್ಲಿ ಅಜ್ಜಿಮನೆಗೆ ಬರುತ್ತಿದ್ದ ಇನ್ನಿಬ್ಬರು. ಬಾಲು, ಕೃಷ್ಣ ಅಘನಾಶಿನಿಯಲ್ಲೇ ಓದುತ್ತಿದ್ದವರು. ಹಾಗಾಗಿ ಅವರಿಗೆ ಊರೊಳಗಿನ ವಿವರಗಳು ಹೆಚ್ಚು ಖಚಿತವಾಗಿ ತಿಳಿದಿದ್ದವು. ಒಂದು ಮಧ್ಯಾಹ್ನ ಎಲ್ಲರೂ ಮಲಗಿದಾಗ ನಾವು ನಾಲ್ವರೇ ಸೇರಿ ದೋಣಿ ಬಿಡಿಸಿ ತದಡಿವರೆಗೆ ಹೋಗಿ ಬರುವುದು ಆ ರಹಸ್ಯ ಯೋಜನೆ. ದೋಣಿಯಲ್ಲಿ ಓಡಾಡುವಾಗ ಕಾಡಿ, ಬೇಡಿ ಹುಟ್ಟು ಹಾಕಲು ಸ್ವಲ್ಪ ಮಟ್ಟಿಗೆ ಕಲಿತಿದ್ದೆವು. ಅದೇನೂ ಅಷ್ಟು ಕಷ್ಟದ ವಿದ್ಯೆಯಲ್ಲ ಎಂದು ನಮಗೆ ತೋರಿತು. ಆದರೆ, ಹಿರಿಯರ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ನಮಗೆ ಆ ನಿಟ್ಟಿನಲ್ಲಿ ಮುಂದುವರಿಯಲು ಪ್ರೋತ್ಸಾಹವಿರಲಿಲ್ಲ. ಸರಿ, ಕೇಶಪ್ಪಚ್ಚಿ ಅಂಬಿಗರ ಮಾಚನ ಜೊತೆಯಲ್ಲಿ ಹುಟ್ಟು ಹಾಕಿ ಅಘನಾಶಿನಿಗೆ ಬಂದವನಷ್ಟೆ? ಇಂಥ ಸದ್ಗುರು ಜೊತೆಯಲ್ಲಿರುವಾಗ ನಮ್ಮ ಸಾಹಸಕ್ಕೆ ಭೀಮಬಲ ಎಂದು ಭಾವಿಸಿದೆವು. ಅಂಗಳದಲ್ಲಿ ಹಪ್ಪಳ ಕಾಯಲು ನಿಯೋಜಿಸಲ್ಪಟ್ಟ ನಾವು ಇಂಥ ಅಪರೂಪದ ದಿಗ್ವಿಜಯಕ್ಕಾಗಿ ಉಪಾಯ ಹುಡುಕುತ್ತಿದ್ದೆವು. ಕೇಶಪ್ಪಚ್ಚಿಗೂ ಈ ಸಾಹಸ ತುಂಬಾ ಇಷ್ಟವಾಯಿತು. 'ದೋಣಿ ನಡೆಸುವವನು ನಾನು, ನಿಮಗೂ ಒಮ್ಮೊಮ್ಮೆ ಅವಕಾಶ ಕೊಡುವೆ, ಇದಕ್ಕೆ ಒಪ್ಪಿದರೆ ಸರಿ, ಇಲ್ಲವಾದರೆ ದೊಡ್ಡವರಿಗೆ ಹೇಳಿಕೊಡುವೆ' ಎಂದು ತನ್ನ ಪ್ರಳಯಾಂತಕ ಘೋಷಣೆ ಮಾಡಿಬಿಟ್ಟ. ನಮಗೆ ಯಾವುದಕ್ಕೂ ಕೇಶಪ್ಪಚ್ಚಿ ನಮ್ಮ ಜೊತೆ ಇದ್ದರೆ ಧೈರ್ಯ ಎಂದು ತೋರಿತು. ಅಜ್ಜ ಕುಮಟೆಗೋ, ಕತಗಾಲಿಗೋ ವೈದಿಕ ಕಾರ್ಯಕ್ರಮಗಳಿಗೆಂದು ಹೋಗಿದ್ದರು. ಹಾಗಾಗಿ ಅವರ ಕಣ್ಣು ತಪ್ಪಿಸುವುದು ಎಂಬ ಸಮಸ್ಯೆ ಇರಲಿಲ್ಲ. ಅಜ್ಜಿಗೆ ಮಧ್ಯಾಹ್ನದ ನಿದ್ದೆ ಬಲು ಆಪ್ಯಾಯಮಾನ. ಅರ್ಧ ಮುಕ್ಕಾಲು ಗಂಟೆ ಮಲಗುತ್ತಿದ್ದಳು. ನಮ್ಮ ಕಿತಾಪತಿಗಳೆಲ್ಲ ತೀರ ವಿಪರೀತಕ್ಕೆ ಹೋಗುವಂಥವಲ್ಲ, ಸುಧಾರಿಸಿಕೊಳ್ಳಬಹುದು ಎಂದೇನೋ ಒಂದು ಆತ್ಮವಿಶ್ವಾಸ.

ಸರಿ, ಸದ್ದಿಲ್ಲದೆ ನಾವು ತಾರಿಕಟ್ಟೆ ಹತ್ತಿರ ಸೇರಿದೆವು. ಬಾಲು, ಕೃಷ್ಣ ಅವರ ಮನೆಯಿಂದ ಪ್ರತ್ಯೇಕವಾಗಿ ತಾರಿಕಟ್ಟೆಗೆ ಬಂದರು. ನಾನು ಮತ್ತು ನನ್ನ ತಂಗಿ ಮಲಗಿದಂತೆ ನಟಿಸುತ್ತಿದ್ದೆವು. ಒಂದು